1581 (2092) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು;

ಆ) ಇದೇ ಅವಧಿಯಲ್ಲಿ ಸರ್ಕಾರಕ್ಕೆ ಬಂದಿದ್ದ ಪ್ರಸ್ತಾವನೆಗಳೆಷ್ಟು (ಮಂಜೂರಾಗಿರುವ ಶಾಲೆಗಳು ಹಾಗೂ ಪ್ರಸ್ತಾವನೆಯ ವಿವರಗಳನ್ನು ವಿಧಾನ ಸಭಾ ಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು);

ಇ) ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಇನ್ನೂ ಎಷ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಅವಶ್ಯಕತೆ ಇದೆ;

ಈ) ಈ ಬಗ್ಗೆ ಸರ್ಕಾರಕ್ಕೆ ವಿವಿಧ ಜಿಲ್ಲೆಗಳಿಂದ ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಉ) ಪ್ರಸಕ್ತ ಸಾಲಿನಲ್ಲಿ ಬೀದರ್ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಹೊಸದಾಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳ ಸಂಖ್ಯೆ : 527
ಸರ್ಕಾರಿ ಪ್ರೌಢಶಾಲೆಗಳ ಸಂಖ್ಯೆ : 485

ಆ) 2006–07ನೇ ಸಾಲಿನಲ್ಲಿ 485 ಪ್ರಸ್ತಾವನೆಗಳನ್ನು ಸಲ್ಲಿಸಿದ್ದು, ಸರ್ಕಾರ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಪ್ರೌಢಶಾಲೆಗಳನ್ನು ಮಂಜೂರು ಮಾಡಿದೆ (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ – 1 ರಲ್ಲಿ ಲಗತ್ತಿಸಿದೆ).

ಇ) ಆಯಾಯ ಸ್ಥಳಗಳ ಶೈಕ್ಷಣಿಕ ಅಗತ್ಯತೆ ಮತ್ತು ಆಯವ್ಯಯದಲ್ಲಿನ ಅವಕಾಶದ ಪ್ರಕಾರ ಹಂತ ಹಂತವಾಗಿ ಶಾಲೆಗಳನ್ನು ಮಂಜೂರು ಮಾಡಲಾಗುತ್ತಿದ್ದು, ಇದು ಸತತವಾದ ಪ್ರಕ್ರಿಯೆಯಾಗಿದೆ.

ಈ) **ಸರ್ಕಾರಿ ಪ್ರಾಥಮಿಕ ಶಾಲೆ**

* 2007–08 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ 603 ಹೊಸ ಪ್ರಾಥಮಿಕ ಶಾಲೆಗಳಿಗೆ ಪ್ರಸ್ತಾವನೆಗಳು ಬಂದಿದ್ದು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಿದೆ (ಜಿಲ್ಲಾವಾರು ಪಟ್ಟಿಯನ್ನು ಅನುಬಂಧ–2ರಲ್ಲಿ ಲಗತ್ತಿಸಿದೆ).

ಸರ್ಕಾರಿ ಪ್ರೌಢಶಾಲೆ

* 2007–08ನೇ ಸಾಲಿಗೆ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಉ) **ಸರ್ಕಾರಿ ಪ್ರಾಥಮಿಕ ಶಾಲೆ**

* ಔರಾದ್––––––––17
* ಬಸವಕಲ್ಯಾಣ––––––10
* ಭಾಲ್ಕಿ––––––––––09
* ಬೀದರ್––––––––––21
* ಹುಮ್ನಾಬಾದ್––––––22

ಸರ್ಕಾರಿ ಪ್ರೌಢಶಾಲೆ

*	ಹುಮ್ನಾಬಾದ್	–	ಮರಕಲಾ ಮದರಗಾವ್ ಬನೀರಾಪುರ ಸುಲ್ತಾನಾಬಾದ್
*	ಬಸವಕಲ್ಯಾಣ	–	ರಾಮತೀರ್ಥ ಬೋಸಗ ಗಡಿಗೌಡಗಾಂವ್

			ಅಟ್ಟೂರು
*	ಔರಾದ್	–	ಚಿಮ್ಮೇಗಾಂ
*	ಭಾಲ್ಕಿ	–	ಕೆರೂರ
			ಉಚ್ಚಾ
*	ಬೀದರ್	–	ಶಿರಶಿ
			ನಂದಗಾವ್

1582 (2117) ಶ್ರೀ ಹೆಚ್.ಹಾಲಪ್ಪ (ಹೊಸನಗರ) :– ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕು ತುಂಗಾ ಏತ ನೀರಾವರಿ ಯೋಜನೆಯ ಅನುಷ್ಠಾನಕ್ಕೆ ಇರುವ ತೊಂದರೆಗಳೇನು;

ಆ) ತೊಂದರೆಗಳನ್ನು ನಿವಾರಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಯಾವ ಕಾಲ ಮಿತಿಯೊಳಗೆ ಇದನ್ನು ನಿವಾರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) :

ಅ) ತುಂಗಾ ಏತ ನೀರಾವರಿ ಯೋಜನೆಗೆ ಸುಮಾರು 173 ಎಕರೆ ಅರಣ್ಯ ಪ್ರದೇಶವು ಕಾಲುವೆ ನಿರ್ಮಾಣಕ್ಕಾಗಿ ಬೇಕಾಗಿರುತ್ತದೆ. ಇದರ ಬಿಡುಗಡೆಗಾಗಿ ಅರಣ್ಯ ಇಲಾಖೆಯೊಂದಿಗೆ ಕರ್ನಾಟಕ ನೀರಾವರಿ ನಿಗಮವು ಪತ್ರ ವ್ಯವಹಾರವನ್ನು ನಡೆಸಿರುತ್ತದೆ. ಅರಣ್ಯ ಭೂಮಿಯ ಬಿಡುಗಡೆಯು ಇದುವರೆವಿಗೂ ಆಗದೇ ಇರುವ ಕಾರಣ, ಈ ಯೋಜನೆಯ ಅನುಷ್ಠಾನವು ಸಾಧ್ಯವಾಗಿರುವುದಿಲ್ಲ.

ಆ) ಅರಣ್ಯ ಭೂಮಿಯ ಬಿಡುಗಡೆಗಾಗಿ ಅರಣ್ಯ ಇಲಾಖೆಯೊಂದಿಗೆ ಸತತ ಪ್ರಯತ್ನಗಳನ್ನು ಮಾಡಿದ್ದು, ಅದನ್ನು ಮುಂದುವರೆಸಲಾಗಿದೆ.

ಇ) ಅರಣ್ಯ ಭೂಮಿಯ ಬಿಡುಗಡೆಯ ನಂತರವೇ ಯೋಜನೆಯ ಅನುಷ್ಠಾನದ ಕಾಲಮಿತಿಯ ಬಗ್ಗೆ ನಿರ್ಧರಿಸಲು ಸಾಧ್ಯವಾಗುವುದು.